ನಿಮ್ಮೊಡನೆ

# ನವಜಾತ ಶಿಶುಗಳನ್ನು ರಕ್ಷಿಸಿ...

ಸಾವಿರ ಮಕ್ಕಳ ಜನನದಲ್ಲಿ ಸುಮಾರು 40 ಮಕ್ಕಳು ಸಾವಿಗೀಡಾಗುತ್ತಾರೆ ಎನ್ನುವುದು ದೇಶಕ್ಕೆ ಶೋಭೆ ತರುವ ಸಂಗತಿಯಂತೂ ಅಲ್ಲ. ನವಜಾತ ಶಿಶು ಮರಣವನ್ನು ತಡೆಯಲು ದಾರಿ ಯಾವುದು?

ಭಾರತದಲ್ಲಿ ಶಿಶುಮರಣದ ಪ್ರಮಾಣ ಇತ್ತೀಚಿನ ವರ್ಷಗಳಲ್ಲಿ ಕಡಿಮೆ ಆಗಿದೆ. ಆದರೆ ಇತರ ದೇಶಗಳಿಗೆ ಹೋಲಿಸಿದರೆ ನಮ್ಮಲ್ಲಿ ಶಿಶುಮರಣದ ಪ್ರಮಾಣ ಹೆಚ್ಚೇ ಅನ್ನಬಹುದು. 1990ರಿಂದ 2015ರ ನಡುವಣ ಅವಧಿಯಲ್ಲಿ ಸರಕಾರ ಸಂಗ್ರಹಿಸಿರುವ ಶಿಶುಮರಣದ ಅಂಕಿ ಅಂಶಗಳು ಸರ್ಕಾರದ ಆರೋಗ್ಯ ಯೋಜನೆಗಳ ಯಶಸ್ಸಿನ ಕಥೆಯನ್ನೇ ಹೇಳುತ್ತವೆ. 1990 ರಲ್ಲಿ ಶಿಶು ಮರಣದ ಪ್ರಮಾಣ 1000ಕ್ಕೆ 80 ಇದ್ದುದು, 2015 ರಲ್ಲಿ 1000ಕ್ಕೆ 39ಕ್ಕೆ ಇಳಿದಿದೆ. 2014ರ ಭಾರತದ ನಾಗರಿಕ ನೋಂದಣಿ ದಾಖಲೆಗಳ ಪ್ರಕಾರ, ಆ ವರ್ಷ 1.89 ಲಕ್ಷ ನವಜಾತ ಶಿಶುಗಳು ಮರಣ ಹೊಂದಿದ್ದಾರೆ. ಈ ಶಿಶುಗಳಲ್ಲಿ 80190 ಹೆಣ್ಣು ಶಿಶುಗಳು ಎನ್ನುವುದು ಗಮನಾರ್ಹ. 2013ರ ಅಂಕಿ ಅಂಶಗಳಿಗೆ ಹೋಲಿಸಿದರೆ ಶಿಶುಮರಣದಲ್ಲಿ ಅಲ್ಪ ಪ್ರಮಾಣದ ಇಳಿಕೆಯಷ್ಟೇ ಆಗಿದೆ.

2014ರ ಅಂಕಿ ಅಂಶಗಳ ಪ್ರಕಾರ ದೇಶದ ಮಹಾನಗರಗಳ ಪೈಕಿ ಅತ್ಯಧಿಕ ಪ್ರಮಾಣದ ಶಿಶುಮರಣಗಳು ನಡೆದಿರುವುದು ಅಹ್ಮದಾಬಾದ್, ಮುಂಬೈ, ಚಂಡೀಗಢ ಮತ್ತು ಬೆಂಗಳೂರು ನಗರಗಳಲ್ಲಿ. ಇವುಗಳ ಪೈಕಿ ಅತ್ಯಂತ ಹೆಚ್ಚು ಹೆಣ್ಣು ಶಿಶು ಮರಣಗಳು ಸಂಭವಿಸಿರುವುದು ಮುಂಬೈ, ಅಹ್ಮದಾಬಾದ್ ಮತ್ತು ಬೆಂಗಳೂರು ನಗರಗಳಲ್ಲಿ. ಅಂಕಿ ಅಂಶಗಳು ಎಲ್ಲ ಸಂದರ್ಭಗಳಲ್ಲೂ ಪೂರ್ಣ ಸತ್ಯವನ್ನು ಬಿಂಬಿಸುತ್ತವೆ ಎಂದು ಹೇಳಲಾಗದು. ದೇಶದ ಬಹುತೇಕ ನಗರಗಳು ವಲಸೆ ಕೇಂದ್ರಗಳು. ಹಳ್ಳಿಗಳಿಂದ ಬರುವ ಲಕ್ಷಾಂತರ ಜನರು ನಗರಗಳಲ್ಲಿ ಅಸಂಘಟಿತ ಜೀವನ ಶೈಲಿಯೊಂದಿಗೆ ಬದುಕುತ್ತಿದ್ದಾರೆ. ಸರಿಯಾದ ವಸತಿ ಸೌಲಭ್ಯ ಇಲ್ಲದ ಇಂತಹ ಕುಟುಂಬಗಳಲ್ಲಿ ಶಿಶು ಮರಣಕ್ಕೆ ಕಾರಣವಾಗುವ ಅಂಶಗಳನ್ನು ತಡೆಯಬಹುದು. ಮುಖ್ಯವಾಗಿ ಇಂತಹ ಶಿಶುಮರಣಗಳು ನೋಂದಣಿ ಆಗುವುದೇ ಇಲ್ಲ. ದೇಶದ ಒಟ್ಟು ಶಿಶುಮರಣ ಪ್ರಮಾಣದಲ್ಲಿ ಗ್ರಾಮೀಣರ ಪಾಲು ಶೇಕಡಾ 39ರಷ್ಟು ಮಾತ್ರ ಇರುವುದು ಅಲ್ಲಿ ಆರೋಗ್ಯ ಸವಲತ್ತುಗಳು ಅತ್ಯುತ್ತಮವಾಗಿದೆ ಎಂದಲ್ಲ. ಗ್ರಾಮೀಣ ಪ್ರದೇಶದ ಬಹುತೇಕ ಶಿಶುಮರಣಗಳು ನೋಂದಣಿ ಆಗುವುದೇ ಇಲ್ಲ.

ನವಜಾತ ಶಿಶುಗಳು ಮತ್ತು ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಸಾವನ್ನು ತಡೆಯಲು ಏನು ಮಾಡಬಹುದು? ಸಮೀಕ್ಷೆಯ ಪ್ರಕಾರ ಶೇಕಡಾ 80ರಷ್ಟು ಶಿಶುಮರಣಗಳು ತಡೆಯಬಹುದಾದ ಮೂರು ಕಾರಣಗಳಿಂದ ಸಂಭವಿಸುತ್ತವೆ. ಜನನದ ಸಂದರ್ಭದಲ್ಲಿ ಉಂಟಾಗುವ ಸಂಕೀರ್ಣ ಸಮಸ್ಯೆಗಳು, ಅವಧಿಪೂರ್ವ ಜನನಗಳ ಸಂದರ್ಭದ ಸಮಸ್ಯೆಗಳು ಮತ್ತು ನವಜಾತ ಶಿಶುಗಳಿಗೆ ಉಂಟಾಗುವ ಸೋಂಕುಗಳೇ ಈ ಕಾರಣಗಳು.

ನಮ್ಮಲ್ಲಿ ಆರೋಗ್ಯ ಸುಧಾರಣೆಗೆ ಸಂಬಂಧಿಸಿದ ಯೋಜನೆಗಳ ಕೊರತೆ ಇಲ್ಲ. ಮುಖ್ಯವಾಗಿ ಭಾರತ ನವಜಾತ ಕ್ರಿಯಾ ಯೋಜನೆ ಹಾಗೂ ಜನನಿ ಸುರಕ್ಷಾ ಯೋಜನೆಗಳು ಮಕ್ಕಳು ಮತ್ತು ತಾಯಂದಿರ ಆರೋಗ್ಯ ರಕ್ಷಣೆಗೆ ಸಂಬಂಧಿಸಿದ ಮಹತ್ವದ ಯೋಜನೆಗಳು. ಆದರೆ ಸಮೀಕ್ಷೆಯ ಪ್ರಕಾರ ದೇಶದಲ್ಲಿ ಇವತ್ತಿಗೂ ಶೇಕಡಾ 67 ರಷ್ಟು ಹೆರಿಗೆಗಳು ಸೂಕ್ತ ತರಬೇತಿ ಇಲ್ಲದ ಮಹಿಳೆಯರ ಸಮ್ಮುಖದಲ್ಲಿ ನಡೆಯುತ್ತದೆ. ಹೆರಿಗೆಯ ಸಂದರ್ಭದಲ್ಲಿ ಸೂಕ್ತ ತರಬೇತಿ ಹೊಂದಿದ ಮಹಿಳೆಯರು ಮತ್ತು ಸಿಬ್ಬಂದಿ ಇದ್ದರೆ ಬಹುತೇಕ ಶಿಶುಮರಣಗಳನ್ನು ತಡೆಯಬಹುದು ಎನ್ನುವುದರಲ್ಲಿ ಅನುಮಾನವಿಲ್ಲ.

ನಮ್ಮಲ್ಲಿ 9 ಲಕ್ಷದಷ್ಟು ಆಶಾ (ನೋಂದಾಯಿತ ಸಾಮಾಜಿಕ ಆರೋಗ್ಯ ಕಾರ್ಯಕರ್ತರು) ಸಿಬ್ಬಂದಿ ಇದ್ದಾರೆ. ರಾಷ್ಟ್ರೀಯ ಆರೋಗ್ಯ ಸುಧಾರಣೆಯಲ್ಲಿ ಈ ಕಾರ್ಯಕರ್ತರು ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ಆಶಾ ಕಾರ್ಯಕರ್ತರ ಸಂಖ್ಯೆಯನ್ನು ಹೆಚ್ಚಿಸುವುದರ ಜತೆಗೆ ಗ್ರಾಮೀಣ ಪ್ರದೇಶದಲ್ಲಿ ಸೂಕ್ತ ಆರೋಗ್ಯ ಪರಿಕರಗಳನ್ನು ಒದಗಿಸುವ ಅಗತ್ಯವಿದೆ. ಗ್ರಾಮೀಣ ಪ್ರದೇಶಗಳಲ್ಲಿ ಇರುವ ಅನಕ್ಷರತೆ, ಬಡತನ, ಮೂಢನಂಬಿಕೆಗಳು ಮತ್ತು ಪೋಷಕಾಂಶಗಳ ಕೊರತೆ ಶಿಶುಮರಣ ಪ್ರಮಾಣ ಹೆಚ್ಚುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿವೆ. ಇವುಗಳ ನಿವಾರಣೆಯ ನಿಟ್ಟಿನಲ್ಲಿ ಸಾಮಾಜಿಕ ಕಾರ್ಯಕರ್ತರ ಸೇವೆಯನ್ನೂ ಬಳಸಿಕೊಳ್ಳಬೇಕಾಗಿದೆ. ಪ್ರಗತಿಯ ನಿಟ್ಟಿನಲ್ಲಿ ದಾಪುಗಾಲು ಇಡುತ್ತಿರುವ ದೇಶದಲ್ಲಿ 1000 ಜನನದಲ್ಲಿ 40 ಮಕ್ಕಳು ಮರಣ ಹೊಂದುತ್ತಾರೆ ಎನ್ನುವುದು ಯಾರಿಗೂ ಹೆಮ್ಮೆ ತರುವ ಸಂಗತಿಯಲ್ಲ.


ಈಶ್ವರ್

■ ಬಿ.ಎಂ.ಹನೀಫ್